ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**Bangalore Development Authority**

ಬೆಂಅಪ್ರಾ:ನಯೋಸಃ CLU- 185/ 12-13/ 5697 /2012-13.

ಸಂಖ್ಯೆ :
No.

ದಿನಾಂಕ : 28/12/12
Date :

# ಪ್ರಾರಂಭಿಕ ದೃಢೀಕರಣ ಪತ್ರ

ವಿಷಯ: ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 12,13/1,22 ಮತ್ತು 36 ರಲ್ಲಿನ ಒಟ್ಟು 08 ಎಕರೆ 26.08 ಗುಂಟೆ ಅಥವಾ 35055.40 ಚ.ಮೀ. ವಿಸ್ತೀರ್ಣ ಪ್ರದೇಶವನ್ನು ಕೈಗಾರಿಕೆ(ಹೈಟೆಕ್) ಉಪಯೋಗದಿಂದ ವಾಸದ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡುವ ಬಗ್ಗೆ.

1. ನಿಮ್ಮ ಪತ್ರ ದಿನಾಂಕ 22-09-2012.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A Sub section (3) ರಂತೆ.
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ:ನಯೋಸಃ ಸಿಎಲ್‌ಯು- 185/12-13/5330/ 2012-13, ದಿನಾಂಕ 21.12.2012ರ ಮೇರೆಗೆ ಅರ್ಜಿದಾರರಿಗೆ ಶುಲ್ಕವನ್ನು ಪಾವತಿಸಲು ತಿಳಿಸಿರುವುದು.
4. ಅರ್ಜಿದಾರರು ಕೆನರಾಬ್ಯಾಂಕ್ ಶಾಖೆಯಲ್ಲಿ ದಿನಾಂಕ 24.12.2012 ರಂದು ಚಲನ್ ನಂ. 11427 ರ ಮೂಲಕ ಸಂದಾಯಿಸಿರುವ ಉತ್ತಮತೆ ಶುಲ್ಕ ₹7,01,108/- ಕೆರೆ ಅಭಿವೃದ್ಧಿ ಶುಲ್ಕ ₹8,66,250/- , ಪರಿಶೀಲನಾ ಶುಲ್ಕ ₹ 17,528/- ಮತ್ತು ಪೂರ್ಣಾಂಕಕ್ಕೆ ₹14/- ಒಟ್ಟು ₹15,84,900/- ಅನ್ನು ಸಂದಾಯಿಸಿರುವುದನ್ನು ಬೆಂ.ಅ.ಪ್ರಾದ ಆರ್ಥಿಕ ವಿಭಾಗದವರು ದಿನಾಂಕ 27-12-2012 ರಂದು ದೃಢೀಕರಿಸಿರುವುದು.

ಅರ್ಜಿದಾರರು ಉಲ್ಲೇಖ (1) ರಲ್ಲಿ ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 12,13/1,22 ಮತ್ತು 36 ರಲ್ಲಿನ ಒಟ್ಟು 08 ಎಕರೆ 26.08 ಗುಂಟೆ ಅಥವಾ 35055.40 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು **ಕೈಗಾರಿಕೆ (ಹೈಟೆಕ್)** ಉಪಯೋಗದಿಂದ **ವಸತಿ** ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಕೋರಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಸಂಬಂಧ ಉಲ್ಲೇಖ (2)ರಂತೆ ಭೂ-ಬದಲಾವಣೆ ಸಂಬಂಧ ಉತ್ತಮತೆ ಶುಲ್ಕ, ಕೆರೆ ಅಭಿವೃದ್ಧಿ ಶುಲ್ಕ ಹಾಗೂ ಪರಿಶೀಲನಾ ಶುಲ್ಕದ ಬಾಬ್ತು ಒಟ್ಟು ₹ 15,84,900/- (₹ ಹದಿನೈದು ಲಕ್ಷದ ಎಂಭತ್ತನಾಲ್ಕು ಸಾವಿರದ ಒಂಭೈನೂರು ಮಾತ್ರ) ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ಉಲ್ಲೇಖ (3)ರಲ್ಲಿ ತಿಳಿಸಿದ್ದು ಉಲ್ಲೇಖ(4) ರಂತೆ ಅರ್ಜಿದಾರರು ನಿಗದಿತ ಶುಲ್ಕಗಳನ್ನು ಪಾವತಿ ಮಾಡಿರುತ್ತಾರೆ. ಹಾಗೂ ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದಲ್ಲಿ ದಿನಾಂಕ 27-12-2012 ರಂದು ದೃಢೀಕರಿಸಿರುತ್ತಾರೆ.

..2.,

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು 560 020

T. Chowdaiah Road, Kumarapark West, Bangalore 560 020, Facsimile : 2334 5799, E-mail : bda@vsnl.com

ಆದುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A Sub Section (3) ರಂತೆ ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 12,13/1,22 ಮತ್ತು 36 ರಲ್ಲಿನ ಒಟ್ಟು 08 ಎಕರೆ 26.08 ಗುಂಟೆ ಅಥವಾ 35055.40 ಚ.ಮೀ. ವಿಸ್ತೀರ್ಣ ಪ್ರದೇಶವನ್ನು **ಕೈಗಾರಿಕೆ(ಹೈಟೆಕ್)** ಉಪಯೋಗದಿಂದ **ವಸತಿ** ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು, ಅನುಮತಿ ನೀಡಲಾಗಿದೆ.

1. ಪ್ರಸ್ತಾಪಿತ ಪ್ರದೇಶದ ಬಡಾವಣೆ / ಅಭಿವೃದ್ಧಿ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು.
2. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ : ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ-ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು ಹಾಗೂ ಪ್ರತಿ ಚ.ಮೀ.ಗೆ 20 ಲೀಟರ್‌ನಂತೆ **"ಮಳೆ ನೀರು ಕೊಯ್ಲು"** ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
4. RMP-2015 ರಲ್ಲಿ ಉದ್ದೇಶಿಸಿರುವಂತೆ 18.00 ಮೀ. ಅಗಲದ ರಸ್ತೆಯನ್ನು ವಿಸ್ತರಿಸಲು ಅಗತ್ಯ ಜಾಗವನ್ನು ಕಾಯ್ದಿರಿಸುವುದು, ನಾಲಾ ಬಫರ್ ಜಾಗ ಕಾಯ್ದಿರಿಸುವುದು ಹಾಗೂ ಸರ್ವೆ ನಂ.36 ವಮತ್ತು 22 ರಲ್ಲಿನ ಜಾಗವನ್ನು ರಸ್ತೆಗಾಗಿ ಕಾಯ್ದಿರಿಸುವುದು.
5. Betterment Tax ಪಾವತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 45727-45730/2011 ರಲ್ಲಿನ ದಿನಾಂಕ 03-9-2012 ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು , ಮೇಲ್ಮನವಿಯ ತೀರ್ಪಿಗೆ ಬದ್ಧರಾಗಿರುವುದು.
6. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಕರಡು ಪತ್ರ ಆಯುಕ್ತರಿಂದ ಅನುಮೋದನೆಯಾಗಿದೆ)

28/12/12

ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು.

ಇವರಿಗೆ,

**ಶ್ರೀ. ಅಶೋಕ ಅಬ್ರಹಾಂ ಕುರಿಯಾ ಕೋಸ್,**
**ಮತ್ತು**
**ಶ್ರೀ.ಎಸ್.ವಿ.ವೆಂಕಟೇಶ್**
**ನಂ.80/10, ಹುಳಿಮಾವು , ಬನ್ನೇರುಘಟ್ಟ ರಸ್ತೆ ,**
**ಬೆಂಗಳೂರು.**

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority


ಸಂಖ್ಯೆ : ಬೆಂಅಪ್ರಾ/ನಯೋಸ/ CLU-185/2012-13/ 1431 /2013-14.
No.

ದಿನಾಂಕ : 5/7/13
Date :

## ಪ್ರಾರಂಭಿಕ ದೃಢೀಕರಣ ಪತ್ರ

ವಿಷಯ: ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 11, ರಲ್ಲಿನ ಒಟ್ಟು 01 ಎಕರೆ 21 ಗುಂಟೆ [0-01 ಗುಂಟೆ ಖರಾಬು ಹೊರತುಪಡಿಸಿ] 6171.37 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ:
1. ನಿಮ್ಮ ದಿನಾಂಕ 06.06.2013 ರ ಅರ್ಜಿ.
2. ದಿನಾಂಕ 19.03.2013 ರ ಸೆನ್ಸಿಟೀವ್ ವಲಯ ಉಪಸಮಿತಿ ಸಭೆಯ ಠರಾವು ಸಂಖ್ಯೆ 139/2013.
3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Sub section [3] ರಂತೆ .
4. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ಸಿಎಲ್ ಯು-185/2012-13/7492/2012-13, ದಿನಾಂಕ 27.03.2013. ರಲ್ಲಿ ಪರಿಶೀಲನಾ ಶುಲ್ಕ ರೂ. 3,100/- ಗಳನ್ನು ಪಾವತಿಸಲು ತಿಳಿಸಿರುವುದು.
5. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ CLU -185/2012-13/93/2013-14, ದಿನಾಂಕ 24.06.2013 ರಲ್ಲಿ ಭೂ ಉಪಯೋಗ ಬದಲಾವಣೆ ಸಂಬಂಧ ಅರ್ಜಿದಾರರಿಗೆ ರೂ. 02,79,050/- ಗಳನ್ನು ಪಾವತಿಸಲು ತಿಳಿಸಿರುವುದು.
6. ಅರ್ಜಿದಾರರು ದಿನಾಂಕ 28.03.2013 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 14970 ರ ಮೂಲಕ ರೂ. 3,100/ ಗಳನ್ನು ಹಾಗೂ ದಿನಾಂಕ 25.06.2013 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 17172 ರ ಮೂಲಕ ರೂ. 2,79,050/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 28.06.2013 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ[1] ರಲ್ಲಿನ ಅರ್ಜಿಯಲ್ಲಿ ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 11, ರಲ್ಲಿನ ಒಟ್ಟು 01 ಎಕರೆ 21 ಗುಂಟೆ [0-01 ಗುಂಟೆ ಖರಾಬು ಹೊರತುಪಡಿಸಿ] 6171.37 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಕೋರಲಾಗಿರುತ್ತದೆ. ಈ ಸಂಬಂಧ ಉಲ್ಲೇಖ [3] ರಂತೆ ಒಟ್ಟು ಮೊತ್ತ ರೂ. 02,79,050/-ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ತಿಳಿಸಿದ್ದು, ಇದರಂತೆ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ರೂ. 02,79,050/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿರುತ್ತಾರೆ. ಇದನ್ನು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ಉಲ್ಲೇಖ [4] ರಂತೆ ದಿನಾಂಕ 28.06.2013 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುತ್ತಾರೆ.

ಆದುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-ಎ Sub-section [3] ರಂತೆ [Deemed permission] ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 11, ರಲ್ಲಿನ ಒಟ್ಟು 01 ಎಕರೆ 21 ಗುಂಟೆ [0-01 ಗುಂಟೆ ಖರಾಬು ಹೊರತುಪಡಿಸಿ] 6171.37 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಉಲ್ಲೇಖ [2] ರ ಸೆನ್ಸಿಟೇವ್ ವಲಯ ಸಮಿತಿ ಸಭೆಯ ತೀರ್ಮಾನದಲ್ಲಿನ ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಭೂ ಉಪಯೋಗ ಬದಲಾವಣೆಗೆ ಅನುಮತಿ ನೀಡಲಾಗಿದೆ.

| | |
|---|---|
| 1. | ಪ್ರಸ್ತಾಪಿತ ಪ್ರದೇಶದ ಬಡಾವಣೆ / ಅಭಿವೃದ್ಧಿ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು. |
| 2. | ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ : ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ-ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು. |
| 3. | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು ಹಾಗೂ ಪ್ರತಿ ಚ.ಮೀ.ಗೆ 20 ಲೀಟರ್‌ನಂತೆ **"ಮಳೆ ನೀರು ಕೊಯ್ಲು"** ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು. |
| 4. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು. |
| 5. | RMP-2015 ರ ರಸ್ತೆ ಪಂಕ್ತೀಕರಣ ಮತ್ತು ನಾಲಾ ಬಫರ್ ಕಾಯ್ದಿರಿಸುವುದು . |
| 6. | Betterment Tax ಪಾವತಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 45727-45730/2011 ರ ದಿನಾಂಕ 03.09.2012 ರ ತೀರ್ಮಾನದ ವಿರುದ್ದ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ತೀರ್ಪಿಗೆ ಬದ್ದರಾಗಿರುವುದು. |
| 7. | ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು. |
| 8. | ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು. |
| 9. | ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು. |
| 10. | ಪ್ರಶ್ನಿತ ಪ್ರದೇಶಕ್ಕೆ ಇರುವ ರಸ್ತೆಯ ಬಗ್ಗೆ ನಕ್ಷೆ ಮಂಜೂರಾತಿ ನೀಡುವ ಸಕ್ಷಮ ಪ್ರಾಧಿಕಾರವು ಪರಿಶೀಲಿಸಿಕೊಳ್ಳುವುದು. |
| 11. | ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿಗಾಗಿ Sewage Treatment Plant ಸಹಿತ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. |

| | |
|---|---|
| 12. | ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿ ಪಡಿಸುವ ಸಂದರ್ಭದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ದಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 13. | ವಸತಿ ಯೋಜನೆಯಲ್ಲಿನ ಘನತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ, Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. ಹಾಗೂ Dual Piping system ಅನ್ನು ಸಹ ಅಳವಡಿಸತಕ್ಕದ್ದು. |
| 14. | ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂಧರ್ಭದಲ್ಲಿ ಭೂಮಿಯ ಒಳಗಡೆ ಎಲೆಕ್ಟ್ರಿಕ್ ಕೇಬಲ್ ಗಳನ್ನು ಅಳವಡಿಸತಕ್ಕದ್ದು. |
| 15. | ನಾಲಾ ಬಫರ್ ಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆ ಅಥವಾ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇತರೆ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಿಂದ Storm Water Drain ಅಥವಾ ಒಳಚರಂಡಿ ವ್ಯವಸ್ಥೆಗಳು ಹಾಗೂ ರಸ್ತೆಯನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಮುಫತ್ತಾಗಿ ಸಾರ್ವಜನಿಕ ಉಪಯೋಗಕ್ಕಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು. |
| 16. | Buffer ಪ್ರದೇಶದಲ್ಲಿ ಗಿಡ – ಮರಗಳನ್ನು ಬೆಳೆಸತಕ್ಕದ್ದು. |

[ಕರಡು ಪತ್ರ ಆಯುಕ್ತರವರಿಂದ
ಅನುಮೋದಿಸಲ್ಪಟ್ಟಿದೆ]

5/6/13

ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು ,

ಇವರಿಗೆ

ಶ್ರೀ ಅಶೋಕ ಅಬ್ರಹಾಂ ಕುರಿಯಾ ಕೋಸ್,
ಮತ್ತು
ಶ್ರೀ ಎಸ್.ವಿ. ವೆಂಕಟೇಶ್,
# ೮೦/10, ಹುಳಿಮಾವು,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು.